# ಕರ್ನಾಟಕ ಸರ್ಕಾರ

ಸಂ:ಗ್ರಾಅಪ/03/ಗಣಕ ಕೋಶ-2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:30.06.2014

## ಅಧಿಕೃತ ಜ್ಞಾಪನ

ಕರ್ನಾಟಕದ ಎಲ್ಲಾ 5629 ಗ್ರಾಮ ಪಂಚಾಯತಿಗಳನ್ನು ಆಪ್ಟಿಕಲ್ ಫೈಬರ್ ಸಂಪರ್ಕ ಜಾಲದಲ್ಲಿ ಸೇರಿಸುವ ಯೋಜನೆಯ ಕಾರ್ಯವನ್ನು ಭಾರತ ಸರ್ಕಾರದ ಬೆಂಬಲದೊಂದಿಗೆ ಭಾರತ್ ಬ್ರಾಡ್‌ಬ್ಯಾಂಡ್ ನಿಗಮದಿಂದ ಕೈಗೊಳ್ಳಲು ಕರ್ನಾಟಕ ಸರ್ಕಾರವು MoU No.NOFN/RoW-13dtd.26-10-2012 ಒಡಂಬಡಿಕೆಯಂತೆ Right of Way ಅನುಮತಿಯನ್ನು ನೀಡಲು ಒಪ್ಪಿರುತ್ತದೆ.

ಈ MoU ಪ್ರಕಾರ ರಾಜ್ಯ ಸರಕಾರದ ಇಲಾಖೆ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ನೀಡಲು ಭಾರತ್ ಬ್ರಾಡ್‌ಬ್ಯಾಂಡ್ ನಿಗಮದಿಂದ ನಿರ್ಮಿಸಲಾಗುವ ರಾಷ್ಟ್ರೀಯ ಆಪ್ಟಿಕಲ್ ಫೈಬರ್ ಸಂಪರ್ಕಜಾಲದ ಮೂಲಕ ಮಾಹಿತಿ ಹೆದ್ದಾರಿಯನ್ನು ರಚಿಸುವ ಸಲುವಾಗಿ ಅಧೀನ ಕಛೇರಿಗಳು/ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಸರಕಾರಿ ಸ್ವಾಮ್ಯದ PSU ಮತ್ತು ಏಜೆನ್ಸಿಗಳಿಂದ Right of Way ಶುಲ್ಕ ಮತ್ತು ರಸ್ತೆಯ ಪುನರ್‌ಉತ್ಥಾನಕ್ಕಾಗಿ ಶುಲ್ಕವನ್ನು ವಿಧಿಸಲಾಗುವುದಿಲ್ಲ.

ಗ್ರಾಮ ಪಂಚಾಯಿತಿಗೆ ಸಂಪರ್ಕ ಕಲ್ಪಿಸಲು ವಿದ್ಯುತ್ ಸರಬರಾಜು ಮಾಡುವ ಕಂಪನಿಗಳು ತಮ್ಮ ವಿದ್ಯುತ್ ಸಾಗಿಸುವ ಲೈನ್‌ಗಳು, ಉಪ ಲೈನ್‌ಗಳು, ವಿತರಿಸುವ ಲೈನ್‌ಗಳೊಂದಿಗೆ OPGW/ADSS ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಹಾಕಲು ಈ ನೋಟಿಫಿಕೇಶನ್ ಪ್ರಕಾರ ಯಾವುದೇ ಶುಲ್ಕವನ್ನು ತೆಗೆದುಕೊಳ್ಳದೆ ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯಿತಿಗಳು ಅನುಮತಿಯನ್ನು ನೀಡಬೇಕು. ಈ ನೋಟಿಫಿಕೇಶನ್ ಪ್ರಕಾರ ಭಾರತ್ ಬ್ರಾಡ್‌ಬ್ಯಾಂಡ್ ನಿಗಮಕ್ಕೆ ಕೇಬಲನ್ನು ಹಾಕಲು, ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಮಾಡಲು ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ ಮತ್ತು ಯಾವುದೇ ಗ್ರಾಮ ಪಂಚಾಯಿತಿಯಿಂದ Right of Way ಅನುಮತಿಯ ಅವಶ್ಯಕತೆ ಇರುವುದಿಲ್ಲ. ಭಾರತ್ ಬ್ರಾಡ್‌ಬ್ಯಾಂಡ್ ನಿಗಮಕ್ಕೆ ನೀಡಲಾದ ಈ ನೋಟಿಫಿಕೇಶನ್ ನಿಯಮಾನುಸಾರ ಯಾವುದೇ ವಿಳಂಬವಿಲ್ಲದೆ ಪಂಚಾಯತಿಗಳಿಗೆ ಅನ್ವಯವಾಗುತ್ತದೆ.

(ಸಹಿ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಶ್ರೀ ಎಂ.ಬಿ. ರವಿಚಂದ್ರನ್, ಸಿ.ಜಿ.ಎಂ.(ಪ್ರಾಜೆಕ್ಟ್), ಕರ್ನಾಟಕ, ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿಮಿಟೆಡ್, 2ನೇ ಮಹಡಿ, CACT ಕ್ಯಾಂಪಸ್, ದೂರವಾಣಿ ನಗರ, ಬೆಂಗಳೂರು.

2. ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ. ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 25 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಎಲ್ಲಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಮಹಾಲೇಖಪಾಲರು(ಲೆಕ್ಕಪತ್ರ ಪರಿಶೋಧನೆ), ಬೆಂಗಳೂರು.
2. ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು – 10 ಪ್ರತಿಗಳು.
3. ಹೆಚ್ಚುವರಿ ಪ್ರತಿಗಳು.